## 33

# “ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸುವದಿಲ್ಲ”

## (18:1-19:16)

ಪ್ರತಿಯೊಂದು ಸಂಗೀತಕ್ಕೆ ಅದರ ಸ್ವಂತ ಭಿನ್ನವಾದ ಮನೋಭಾವ ಇರುತ್ತದೆ. ಕೆಲವು ಸ್ವರವಿನ್ಯಾಸಗಳು ನಿನ್ನ ಮುಖಕ್ಕೆ ಮುಗುಳ್ನಗೆಯನ್ನು ತರುವುದು, ಮತ್ತು ಬೇರೆಯವುಗಳು ನಿನ್ನ ಕಣ್ಣಿಗೆ ನೀರು ತರುವವು. ಕೆಲವು ನಿನ್ನ ಜೀವನದ ಅತ್ಯುತ್ತಮ ದಿನಗಳನ್ನು ಜ್ಞಾಪಕಕ್ಕೆ ತರುವವು. ಮತ್ತು ಕೆಲವು ಹೃದಯದ ನೋವುಗಳನ್ನು ಹಿಂದಿರುಗಿ ತರುವವು. ಇದು ನಾವು ತಿಳಿದಿರುವ ಮತ್ತು ಸಂಗೀತಗಳಿಂದ ನಿರೀಕ್ಷಿಸುವ ಸಂಗತಿಯಾಗಿದೆ, ಆದರೆ ಇದನ್ನು ನಾವು ಬೈಬಲಿನ ವಾಕ್ಯಭಾಗಗಳಿಂದಲೂ ನಿರೀಕ್ಷಿಸುತ್ತೇವೆ. ಅವುಗಳಿಗೂ ಸಹ ಅವುಗಳ ಸ್ವಂತವಾದ ಪ್ರತ್ಯೇಕವಾದ ಮನೋಭಾವಗಳಿರುತ್ತವೆ. ಈ ಅಧ್ಯಯನಕ್ಕಾಗಿ ನಮ್ಮ ವಾಕ್ಯ ಭಾಗವು ಪರಿಶುದ್ಧ ಬರಹಗಳಲ್ಲಿ ಅತೀ ದುಃಖಕರವಾದ ಹಾಗೂ ನೋವಿನ ವಾಕ್ಯಭಾಗಗಳಲ್ಲಿ ಒಂದಾಗಿರುತ್ತದೆ.

ಹದಿನೇಳು ಅಧ್ಯಾಯಗಳವರೆಗೆ, ನಾವು ಯೇಸುವಿನ ಜೀವನ ಮತ್ತು ಸೇವೆಯ ಕಥೆಯನ್ನು ಓದಿದ್ದೇವೆ. ಯೇಸುವು ಹೇಳಿದ್ದನ್ನು ಮಾಡಿದ್ದನ್ನು ಯೋಹಾನನು ವರದಿ ಮಾಡಿದ್ದಾನೆ, ಓದುಗನ ಹೃದಯದಲ್ಲಿ ಅದು ನಂಬಿಕೆಯನ್ನು ಉತ್ಪಾದಿಸುವಂತೆ ತನ್ನ ಕಥೆಯನ್ನು ಕ್ರಮಪಡಿಸಿದ್ದಾನೆ. 18ನೆಯ ಅಧ್ಯಾಯದ ಪ್ರಾರಂಭದಲ್ಲಿ, ಯೇಸುವು ದೃಢವಾಗಿ ತನ್ನ ಜೀವನದ ಹೇಳಲ್ಪಟ್ಟ ಮತ್ತು ಉದ್ದೇಶದ ಕಡೆಗೆ, ಶಿಲುಬೆಯ ಕಡೆಗೆ ಚಲಿಸುತ್ತಿದ್ದಾನೆ. ಮಾನಸಿಕವಾಗಿ, ಕಠಿಣವಾದ ಈ ಭಾಗವು ಯೇಸುವು ಶಿಲುಬೆಗೆ ಹಾಕಲ್ಪಡುವದಕ್ಕಿಂತ ಮೊದಲಿನ ತಾಸುಗಳಲ್ಲಿ ನಡೆದ ಮೂರು ನ್ಯಾಯ ವಿಚಾರಣೆಗಳನ್ನು ಹೇಳುತ್ತದೆ: ಯೇಸುವಿನ, ಪೇತ್ರನ ಮತ್ತು ಪಿಲಾತನ ನ್ಯಾಯವಿಚಾರಣೆ ಈ ನ್ಯಾಯ ವಿಚಾರಣೆಗಳು ಮೂರು ಸುತ್ತಿನ ಹಗ್ಗದಂತೆ ಒಂದಾಗಿ ನೇಯಲ್ಪಟ್ಟಿದೆ, ಒಂದಾಗಿ ಆತನ ಕುಮಾರನ ಮತ್ತು ಆತನಲ್ಲಿ ನಂಬಿಕೆಯ ಮಹತ್ವದ ದೇವರ ಸಂದೇಶವನ್ನು ಒಳಗೊಂಡಿದೆ.

### ಯೇಸುವಿನ ನ್ಯಾಯವಿಚಾರಣೆ

ತನ್ನ ಶಿಷ್ಯರೊಂದಿಗೆ ಊಟಮಾಡುವದರಿಂದ ಮತ್ತು ಪ್ರಾರ್ಥನೆ ಮಾಡುವದರಿಂದ ಸಾಯಂಕಾಲವನ್ನು ಯೇಸುವು ಕಳೆದ ನಂತರ ಆತನು ಅವರನ್ನು ಪಟ್ಟಣದ ಹೊರಗೆ ಕಿದ್ರೋನ್ ಕೊಳ್ಳವನ್ನು ದಾಟಿ (18:1),[1] ಆತನು ಮತ್ತು ಆತನ ಶಿಷ್ಯರು ಆಗಾಗ ಪ್ರಾರ್ಥನೆಗೆ ಬರುತ್ತಿದ್ದ ತೋಟದೊಳಗೆ ಬಂದನು. ಯೇಸು ತನ್ನ ಬಂಧನವನ್ನು ತಾನೇ ವ್ಯವಸ್ಥಿತಗೊಳಿಸಿಕೊಂಡದ್ದು ಸ್ಪಷ್ಟವಾಗುತ್ತದೆ. ಆತನನ್ನು ರಕ್ಷಿಸುವದಕ್ಕೆ ಸುತ್ತಲೂ ಜನಸಮೂಹಗಳು ಇಲ್ಲದಾಗ, ರಾತ್ರಿಯಲ್ಲಿ ಆತನನ್ನು ಬಂಧಿಸುವದರಿಂದ ಕುಯುಕ್ತಿ ಮಾಡುತ್ತಿದ್ದೇವೆಂದು ಆತನ ವೈರಿಗಳು ಯೋಚಿಸಿದರು. ವಾಸ್ತವಿಕತೆಯಲ್ಲಿ, ಯೇಸುವು ಯೂದನಿಗಾಗಿ ಮತ್ತು ಸಿಪಾಯಿಗಳಿಗಾಗಿ ತನ್ನನ್ನು ಕಂಡು ಕೊಳ್ಳಲು ಅಂಥ ಸುಲಭ ಸಮಯವನ್ನು ವ್ಯವಸ್ಥೆ ಮಾಡಿದಾತನಾಗಿದ್ದನು.

ಹುಡುಕುವ ಗುಂಪು ಮಹಾಯಾಜಕರಿಂದ ಮತ್ತು ಫರಿಸಾಯರಿಂದ ನಿರ್ದೇಶಿಸಲ್ಪಟ್ಟ ಸಿಪಾಯಿಗಳನ್ನು ಒಳಗೊಂಡಿತ್ತು, ಅವರು ತೋಟದಲ್ಲಿ ಪ್ರವೇಶಿಸಿದಾಗ, ಅವರು ದೀವಟಿಗೆಗಳನ್ನು,

ಪಂಜುಗಳನ್ನೂ, ಆಯುಧಗಳನ್ನು ತೆಗೆದುಕೊಂಡು ಬಂದಿದ್ದರು. "ನೀವು ಯಾರನ್ನು ಹುಡುಕುತ್ತೀರಿ?" ಎಂದು ಯೇಸು ಕೇಳಿದನು (18:4). ಮತ್ತು ಅವರು "ನಜರೇತಿನ ಯೇಸುವನ್ನು" (18:5) ಎಂದು ಅವರು ಉತ್ತರ ಕೊಟ್ಟರು "ನಾನೇ ಅವನು" (18:5) ಎಂದು ಆತನು ಉತ್ತರ ಕೊಟ್ಟಾಗ, ಅವರು ಹಿಂದೆ ಸರಿದು ಭಯದಿಂದ ನೆಲಕ್ಕೆ ಬಿದ್ದರು. ಪುನಃ ಯೇಸು ಅವರಿಗೆ ಯಾರನ್ನು ಹುಡುಕುತ್ತಿರುವಿರಿ ಎಂದು ಕೇಳಿದನು ಮತ್ತು ಅವರು ಪುನಃ "ನಜರೇತಿನ ಯೇಸುವನ್ನು" (18:7) ಎಂದು ಉತ್ತರ ಕೊಟ್ಟರು ಅವರು ಹುಡುಕುತ್ತಿರುವಾ ತನು ತಾನೇ ಎಂದು ಯೇಸು ಪುನಃ ಅವರಿಗೆ ತಿಳಿಸಿದನು. ಕೊನೆಗೆ, ಅವರು ಯೇಸುವನ್ನು ಹಿಡಿದು ಬಂಧಿಸಿದರು ಮತ್ತು ನ್ಯಾಯವಿಚಾರಣೆಗಾಗಿ ಯೆರೂಸಲೇಮಿಗೆ ಹಿಂದಿರುಗಿ ತೆಗೆದುಕೊಂಡು ಹೋದರು. ಆತನು ನಡೆದು ಕೊಂಡ ರೀತಿಯು ಬಂಧನವನ್ನು ತಪ್ಪಿಸಿ ಕೊಳ್ಳುವಂಥವನದಾಗಿರಲಿಲ್ಲ; ಆ ರಾತ್ರಿ ಸಂಭವಿಸಿದ ಘಟನೆಗಳಿಗಾಗಿ ಆ ಮನುಷ್ಯನ ಕಾರ್ಯವು ಹೇಗೆ ಮಹತ್ವದ್ದಾಗಿದೆಯೆಂದು ಭರವಸೆಯುಳ್ಳವನದಾಗಿತ್ತು.

ಯೇಸುವಿನ ನ್ಯಾಯವಿಚಾರಣೆಯ ಮೊದಲಿನ ನಿಲುಗಡೆಯು ಅನ್ನನ ಮನೆಯಾಗಿತ್ತು, ಅವನು ಮಹಾಯಾಜಕ ಕಾಯಫನ ಮಾವನಾಗಿದ್ದನು. ಹಾಗೂ ಹಿಂದಿನ ಮಹಾಯಾಜಕನಾಗಿದ್ದನು. ಯೇಸುವು ಅವನ ಮನೆಗೆ ಮೊದಲು ತೆಗೆದುಕೊಂಡು ಹೋದ ಸಂಗತಿಯು ಕಾಯಫನು ಹುದ್ದೆಯಲ್ಲಿದ್ದರೂ ಅನ್ನನಿಗೆ ಇನ್ನೂ ನಿಜವಾದ ಅಧಿಕಾರ ಇತ್ತೆಂಬುದನ್ನು ಸೂಚಿಸುತ್ತದೆ. ಅನ್ನನ ಮನೆಯಲ್ಲಿ ಯೇಸುವು ಆತನ ಬೋಧನೆಗಳ ಬಗ್ಗೆ ಮತ್ತು ಆತನು ಆಕರ್ಷಿಸಿದ್ದ ಅನುಯಾಯಿಗಳ ಬಗ್ಗೆ ಪ್ರಶ್ನಿಸಲ್ಪಟ್ಟನು. ಆತನು ತನ್ನಲ್ಲಿ ಯಾವ ರಹಸ್ಯಗಳಿಲ್ಲವೆಂದೂ ಎಲ್ಲರಿಗೂ ಕೇಳಿಸುವಂತೆ ತಾನು ಬಹಿರಂಗದಲ್ಲಿ ತನ್ನ ಬೋಧನೆಗಳಿರುವವೆಂದೂ ಹೇಳಿದಾಗ ಅಲ್ಲಿದ್ದ ಒಬ್ಬ ಅಧಿಕಾರಿಯು ಯೇಸುವು ಅನ್ನನಿಗೆ ಗೌರವ ತೋರಿಸಲಿಲ್ಲವೆಂದು ಆತನ ಬಾಯಿಗೆ ಹೊಡೆದನು. ಅದರ ನಂತರ, ಅನ್ನನು ಯೇಸುವನ್ನು ಆತನ ಕೈಗಳು ಇನ್ನು ಕಟ್ಟಲ್ಪಟ್ಟಿದ್ದಂತೆ, ಕಾಯಫನ ಬಳಿಗೆ ಕಳುಹಿಸಿದನು.

ಕಾಯಫನ ಮನೆಯಿಂದ, ಯೇಸುವು ರೋಮನ್ ದೇಶಾಧಿಪತಿಯ ಅಧಿಕೃತ ನಿವಾ ಸಕ್ಕೆ ಕಳುಹಿಸಲ್ಪಟ್ಟನು. ಅದು "ಪ್ರಾಯಟೋರಿಯಮ್" (18:28) ಎಂದು ತಿಳಿಯಲ್ಪಡುತ್ತಿತ್ತು.[2] ಯೇಸುವಿನ ಜೀವದ ಸಂಗತಿಗೆ ಅದು ಸಂಬಂಧಪಡದಿದ್ದರೆ ಅದು ಹಾಸ್ಯಸ್ಪದವಾ ದದ್ದಾಗುತ್ತಿತ್ತು. ಯೆಹೂದ್ಯರಿಗೆ ಪ್ರಾಯಟೋರಿಯಮ್ ಒಂದು ಅನ್ಯರ ಮನೆಯಾಗಿತ್ತು ಯಾವುದೇ ಯೆಹೂದ್ಯನಿಗೆ ಅದರಲ್ಲಿ ಪ್ರವೇಶಿಸುವುದು ವಿಚಾರಮಾಡದಂಥ ಸಂಗತಿಯಾಗಿತ್ತು ಪಸ್ಕ ಹಬ್ಬದ ಸಮಯದಲ್ಲಿ ಅದು ಇನ್ನೂ ಹೆಚ್ಚು ಅಸಾಧ್ಯವಾಗಿತ್ತು![3] ಯೇಸುವಿನ ಮರಣಕ್ಕಾಗಿ ಕರೆ ಯುತ್ತಿದ್ದ ಯೆಹೂದಿ ನಾಯಕರೊಂದಿಗೆ ಮಾತಾಡಲು ತನ್ನ ಸ್ವಂತ ಮನೆಯಿಂದ ಪಿಲಾತನು ಹೊರಗೆ ಬರಬೇಕಾಯಿತು, ಮುಂದಿನ ಕೆಲವು ತಾಸುಗಳಲ್ಲಿ ಘಟನೆ ಅರ್ಥಮಾಡಿಕೊಳ್ಳಲು ಮತ್ತು ಯೇಸುವನ್ನು ಬಿಡುಗಡೆ ಮಾಡಲು ಕೆಲವೊಂದು ಮಾರ್ಗ ಹುಡುಕಲು ಪಿಲಾತನು ಒಳಗೆ ಹೊರಗೆ ಹೋಗಿಬರುವದನ್ನು ಹಲವಾರು ಸಲ ಮಾಡಿದನು.

ಮೊದಲು ಪಿಲಾತನು ಯೆಹೂದಿ ನಾಯಕರಿಗೆ, "ನೀವೇ ಅವನನ್ನು ತಕ್ಕೊಂಡು ಹೋಗಿ ನಿಮ್ಮ ಧರ್ಮಶಾಸ್ತ್ರದ ಪ್ರಕಾರ ಅವನಿಗೆ ತೀರ್ಪು ಮಾಡಿರಿ" (18:31) ಎಂದು ಹೇಳಿದನು. ಹೀಗಿದ್ದರೂ, ಯೇಸುವಿಗೆ ಮರಣ ದಂಡನೆ ವಿಧಿಸಬೇಕೆಂದು ಅವರು ಬಯಸಿದರು ಮತ್ತು ಹಾಗೆ ಮಾಡಲು ರೋಮನ್ ರಾಜಪಾಲನಿಗೆ ಮಾತ್ರ ಹಕ್ಕು ಇತ್ತು ಪಿಲಾತನು ಯೇಸುವನ್ನು ಒಳಗೆ ಕರೆದುಕೊಂಡು ಬಂದನು, ಮತ್ತು ಆತನಿಗೆ ಪ್ರಶ್ನೆ ಮಾಡಲು ಪ್ರಾರಂಭಿಸಿದನು. "ನೀನು ಯೆಹೂದ್ಯರ ಅರಸನು ಹೌದೋ?" (18:33) ಎಂದು ಅವನು ಪ್ರಶ್ನಿಸಿದನು. ಯೇಸು ಅವನಿಗೆ ನೇರವಾದ ಉತ್ತರವನ್ನು ಕೊಡದೇ ಇದ್ದಾಗ, ಪಿಲಾತನು, "ನಾನೇನು ಯೆಹೂದ್ಯನೇ?" (18:35)[4] ಎಂದು ಹೇಳಿದನು. ಆಗ ಯೇಸು ಹೀಗೆ ಉತ್ತರ ಕೊಟ್ಟನು:

> ನನ್ನ ರಾಜ್ಯವು ಈ ಲೋಕದ್ದಲ್ಲ; ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ, ನಾನು

ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿವಾರದವರು ಕಾದಾಡುತ್ತಿದ್ದರು; ಆದರೆ ನನ್ನ ರಾಜ್ಯವು ಇಲ್ಲಿಯದಲ್ಲ (18:36).

ಯೇಸುವಿನೊಂದಿಗೆ ಈ ನಿರಾಶೆಯ ವಾಗ್ವಾದದ ನಂತರ, ಪಿಲಾತನು "ಪುನಃ ಹೊರಗೆ ಹೋದನು" (18:38) ಮತ್ತು ಯೆಹೂದಿ ನಾಯಕರಿಗೆ ತಾನು ಯೇಸುವಿನಲ್ಲಿ ಯಾವುದೇ ಅಪರಾಧವನ್ನು ಕಾಣಲಿಲ್ಲ ಎಂದು ಹೇಳಿದನು. (ಅವನು ಅದರ ಬಗ್ಗೆ ಎಷ್ಟು ಸರಿಯಾಗಿದ್ದನು ಎಂಬುದನ್ನು ಅರ್ಥಮಾಡಿಕೊಳ್ಳಲಿಲ್ಲ!)

ಪಿಲಾತನು ತಾನು ಯೇಸುವನ್ನು ಪ್ರಶ್ನಿಸುವುದು ನ್ಯಾಯ ತೀರ್ಪಿಗಾಗಿ ಆತನನ್ನು ಕರೆದುಕೊಂಡು ಬಂದವರನ್ನು ತೃಪ್ತಿಪಡಿಸುವುದೆಂದು ನಿರೀಕ್ಷಿಸಿದ್ದನು. ಅದು ಹಾಗೆ ಮಾಡಲಿಲ್ಲ. "ಮುಖ ಉಳಿಸಿಕೊಳ್ಳುವ" ಉಪಾಯವು ಮುಂದಿಡಲ್ಪಟ್ಟಾಗ, ನಾಯಕನು ಅದನ್ನು ಸ್ವೀಕರಿಸಲಿಲ್ಲ. ಅದರ ಬದಲು ಕೊಲೆಗಾರನ ಬಿಡುಗಡೆಯನ್ನು[5] ಕೇಳಿಕೊಂಡರು ಮತ್ತು ಯೇಸುವನ್ನು ಶಿಲುಬೆಗೆ ಹಾಕಬೇಕೆಂದು ಬೇಡಿಕೊಂಡರು. ಯೇಸುವನ್ನು ದೂರುತ್ತಿರುವವರನ್ನು ತೃಪ್ತಿಪಡಿಸುವ ತನ್ನ ಪ್ರಯತ್ನಗಳಲ್ಲಿ ನಿರಾಶನಾಗಿ, ಪಿಲಾತನು ಆತನನ್ನು ಹೊಡೆಸಿದನು ಮತ್ತು ತನ್ನ ಸಿಪಾಯಿಗಳು ಆತನನ್ನು ಹೊಡೆಯುವಂತೆ, ಅಪಹಾಸ್ಯ ಮಾಡುವಂತೆ ಬಿಟ್ಟನು. ಆಗ ಮುಳ್ಳಿನ ಕಿರೀಟವು ಮತ್ತು ಕಡುಗೆಂಪು ನಿಲುವಂಗಿಯು ರಕ್ಷಕನ ಮೇಲೆ ಇಡಲ್ಪಟ್ಟವು.

ಅಪಹಾಸ್ಯಕರವಾದ ನಿಲುವಂಗಿ ಮತ್ತು ಕಿರೀಟವನ್ನು ಯೇಸುವು ಧರಿಸಿದಾಗ, ಪಿಲಾತನು ಆತನನ್ನು ಹೊರಗೆ ಕರೆದು ಕೊಂಡು ಬಂದನು ಮತ್ತು ಯೆಹೂದಿ ನಾಯಕರಿಗೆ ತೋರಿಸಿದನು. ಯೇಸುವಿಗಾಗಿ ಅವರ ದ್ವೇಷವು ಇವರಿಂದ ಶಮನವಾಗುವುದೆಂದು ಅವನು ನಂಬಿದ್ದರೆ, ಪಿಲಾತನು ದುಃಖಕರವಾಗಿ ತಪ್ಪಾಗಿದ್ದನು. ಪುನಃ ಅವರು "ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು!" (19:6) ಎಂದು ಕೂಗಿದರು. ಅದನ್ನು ಅವರೇ ಮಾಡಬೇಕೆಂದು ಪಿಲಾತನು ಹೇಳಿದನು. ಯೇಸುವು ತನ್ನನ್ನು ದೇವರ ಕುಮಾರನು ಎಂದು ಹೇಳಿಕೊಂಡಿದ್ದಾನೆ ಎಂದು ಪಿಲಾತನಿಗೆ ತಿಳಿಸಿದರು. ಪಿಲಾತನು ಯೇಸುವಿಗೆ ಮರಣದಂಡನೆ ವಿಧಿಸಲು ಕಾರಣವಾಗುವ ಬದಲು, ಈ ಮಾಹಿತಿಯು ರಾಜ್ಯಪಾಲನನ್ನು ಭಯಗೊಳಿಸಿತು. ಪಿಲಾತನು ಯೆಹೂದ್ಯರ ದೇವರಲ್ಲಿ ನಂಬಿಕೆಯಿಡದಿದ್ದರೂ, ಯಾವುದೇ ದೇವರನ್ನು ಅವನ ಮಗನನ್ನು ಕೊಲ್ಲುವದರಿಂದ ಕೋಪಗೊಳಿಸುವದನ್ನು ಪಿಲಾತನು ಬಯಸಲಿಲ್ಲ!

ಯೇಸುವಿನೊಂದಿಗೆ ಏನು ಮಾಡಬೇಕೆಂಬ ತೊಂದರೆಯ ಸಮಸ್ಯೆಗೆ ತಪ್ಪಿಸಿ ಕೊಳ್ಳುವ ಪರಿಹಾರ ಕಂಡುಕೊಳ್ಳುವದಕ್ಕೆ ಪ್ರಯತ್ನಿಸಲು ಪಿಲಾತನು ಆತನನ್ನು ಪ್ರಾಯಟೋರಿ ಯಮ್‌ದೊಳಗೆ ಹಿಂದಿರುಗಿ ಕರೆದು ಕೊಂಡು ಹೋದನು ಮತ್ತು ಇನ್ನೊಮ್ಮೆ ಆತನನ್ನು ಪ್ರಶ್ನಿಸಲು ಪ್ರಾರಂಭಿಸಿದನು. ಈ ಸಲ, ಯೇಸುವು ಅವನ ಪ್ರಶ್ನೆಗಳಿಗೆ ಉತ್ತರ ಕೊಡಲು ನಿರಾ ಕರಿಸಿದಾಗ, "ನಿನ್ನನ್ನು ಬಿಡಿಸುವ ಅಧಿಕಾರವೂ ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವೂ ನನಗೆ ಉಂಟೆಂಬುದು ನಿನಗೆ ಗೊತ್ತಿಲ್ಲವೋ?" ಎಂದು ಪಿಲಾತನು ಹೇಳಿದನು (ಬಹುಶಃ ಗಟ್ಟಿಯಾಗಿ ಕೂಗಿದನು!) (19:10). "ಮೇಲಣಿಂದ ನಿನಗೆ ಕೊಡಲ್ಪಡದಿದ್ದರೆ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ. ಆದಕಾರಣ ನನ್ನನ್ನು ನಿನಗೆ ಒಪ್ಪಿಸಿದವನಿಗೆ ಹೆಚ್ಚಿನ ಪಾಪ ಉಂಟು" (19:11)[6] ಎಂದು ಯೇಸುವು ಉತ್ತರ ಕೊಟ್ಟನು. ಇದರಿಂದ, ಪಿಲಾತನು ಯೇಸುವನ್ನು ಬಿಟ್ಟು ಬಿಡುವದಕ್ಕಾಗಿ ಮಾರ್ಗವನ್ನು ಕಂಡುಕೊಳ್ಳಲು ಇನ್ನೂ ಕಠಿಣವಾಗಿ ಪ್ರಯತ್ನಿಸಿದನು.

ಯೇಸುವನ್ನು ಬಿಡುಗಡೆ ಮಾಡುವ ಪಿಲಾತನ ಅಂತಿಮ ಪ್ರಯತ್ನವನ್ನು ಯೆಹೂದಿ ನಾಯಕರು ತಿರಸ್ಕರಿಸಿದಾಗ, ಪಿಲಾತನು ಇನ್ನು ಮುಂದೆ ಸಹಿಸಲಾರದಾದನು. ಅಧಿಕೃತ ನ್ಯಾಯತೀರ್ಪುಗಳು ಕೊಡಲ್ಪಡುತ್ತಿದ್ದ, ಗಬ್ಬಥಾ ಎಂದು ಕರೆಯಲ್ಪಡುವ ಸ್ಥಳಕ್ಕೆ ಅವನು

ಯೇಸುವನ್ನು ಕರೆದುಕೊಂಡು ಹೋದನು. ಅಲ್ಲಿ ಅವನು, "ಇಗೋ, ನಿಮ್ಮ ಅರಸನು!" (19:14) ಎಂದು ಹೇಳಿದನು. ಮತ್ತು ಆತನನ್ನು ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿ ಕೊಟ್ಟನು. ಯೇಸುವಿನ ನ್ಯಾಯ ವಿಚಾರಣೆಯು ಮುಗಿಯಿತು.

ನ್ಯಾಯದ ಮಾತುಗಳಲ್ಲಿ, ಆ ರಾತ್ರಿಯ ಕಾರ್ಯಚರಣೆಗಳು ಅವಮಾನಕರವಾದವುಗಳೂ ದುಃಖಾಂತ್ಯವಾದವುಗಳೂ ಆಗಿದ್ದವು ಯೋಹಾನನಿಂದ ಪ್ರಸ್ತುತ ಪಡಿಸಲ್ಪಟ್ಟಂತೆ ನ್ಯಾಯ ವಿಚಾರಣೆಯು ಯೇಸುವು ನಿರ್ದೋಷಿಯೆಂದು ರುಜುವಾತುಪಡಿಸಿತು! ಬಲ ಮತ್ತು ರಾಜಕೀಯವು ಸತ್ಯವನ್ನು ಮತ್ತು ವಿವೇಕವನ್ನು ತಳ್ಳಿಹಾಕಿದವು ನಿರಪರಾಧಿ ಮನುಷ್ಯನು ಸಾಯಲು ದಂಡಿಸಲ್ಪಟ್ಟನು ಯಾಕಂದರೆ ಆತನು "ತಪ್ಪಾದ ಜನರಿಗೆ" ಭಯಪಡಿಸುವಿಕೆಯಾಗಿ ಬಂದನು. ಹೀಗಿದ್ದರೂ, ಕ್ರೈಸ್ತರಿಗೆ, ಆ ರಾತ್ರಿಯ ಮತ್ತು ಮರುದಿನದ ಮುಂಜಾನೆಯ ಘಟನೆಗಳ ಮೇಲೆ ಭಿನ್ನವಾದ ದೃಷ್ಟಿ ಕೋನಗಳಿರುತ್ತವೆ. ನಾವು ಅದನ್ನು ಪ್ರಾಥಮಿಕವಾಗಿ ಭಯಾನಕವಾದ ಅವಘಡದಂತೆ ನೋಡುವದಿಲ್ಲ, ಆದರೆ ಉದಾರವಾದ ದೇಣಿಗೆಯಂತೆ ನೋಡುತ್ತೇವೆ. ಯೇಸುವಿನ ಜೀವವು ಆತನಿಂದ ಕಿತ್ತುಕೊಳ್ಳಲ್ಪಡಲಿಲ್ಲ ಎಂದು ಯೋಹಾನನು ಒತ್ತಿ ಹೇಳಿದನು. ಅದು ಆತನಿಂದ ಸ್ವತಂತ್ರವಾಗಿ ಕೊಡಲ್ಪಟಿತು.

## ಪೇತ್ರನ ನ್ಯಾಯವಿಚಾರಣೆ

ಆ ರಾತ್ರಿಯಲ್ಲಿ ಎರಡನೆಯ ವಿಚಾರಣೆಯು ಪೇತ್ರನ ವೈಯಕ್ತಿಕ ಆತ್ಮಿಕ ವಿಚಾರಣೆಯಾಗಿರುತ್ತದೆ. ಯೇಸುವು ಶಿಷ್ಯರ ಪಾದಗಳನ್ನು ತೊಳೆಯುತ್ತಿದ್ದಂತೆ ಅವನ ಕಥೆಯನ್ನು ನಾವು ಎತ್ತಿಕೊಳ್ಳುತ್ತೇವೆ. ಪೇತ್ರನು, ತನ್ನ ಸ್ವಭಾವಕ್ಕೆ ತಕ್ಕಂತೆ, ಕೂಡಲೇ ಪ್ರತಿಕ್ರಿಯೆ ತೋರಿಸಿದನು, ಮೊದಲು ಯೇಸುವು ತನ್ನ ಪಾದಗಳನ್ನು ತೊಳೆಯ ಬಾರದೆಂದು ತಡೆಗಟ್ಟಿದನು, ಅನಂತರ ತನ್ನ ಇಡೀ ದೇಹವನ್ನು ತೊಳೆಯ ಬೇಕೆಂದು ಕೇಳಿಕೊಂಡನು (13:6-9). ಅನಂತರದಲ್ಲಿ, ಯೇಸುವು ತಾನು ಹೋಗುತ್ತಿರುವಲ್ಲಿಗೆ ಅವರು ಹಿಂಬಾಲಿಸಲಾರರೆಂದು ತನ್ನ ಶಿಷ್ಯರಿಗೆ ಹೇಳಿದಾಗ, ಪೇತ್ರನು ತನ್ನ ಯಜಮಾನನನ್ನು ಹಿಂಬಾಲಿಸುವದಕ್ಕೆ ಯಾವುದೂ ಅಡ್ಡ ಬರಲಾರದೆಂದು ಹೇಳಿದನು. "ಸ್ವಾಮೀ, ನಾನು ಯಾಕೆ ಈಗ ನಿನ್ನ ಹಿಂದೆ ಬರಲಾರೆನು? ನಿನಗಾಗಿ ನನ್ನ ಪ್ರಾಣವನ್ನಾದರೂ ಕೊಟ್ಟೇನು" (13:37) ಎಂದು ಅವನು ಕೇಳಿದನು. ಆಗ ಯೇಸುವು, "ನನಗಾಗಿ ಪ್ರಾಣ ಕೊಟ್ಟೀಯಾ? ನಿನಗೆ ನಿಜನಿಜವಾಗಿ ಹೇಳುತ್ತೇನೆ, ನೀನು ನನ್ನ ವಿಷಯದಲ್ಲಿ ಅವನನ್ನು ಅರಿಯೆನು ಎಂದು ಮೂರು ಸಾರಿ ಹೇಳುವ ತನಕ ಕೋಳಿ ಕೂಗುವುದೇ ಇಲ್ಲ" ಎಂದು ಪ್ರವಾದನೆ ಹೇಳಿದನು (13:38). ಮುಂದಿನ ಕೆಲವು ತಾಸುಗಳಲ್ಲಿ ತಾನು ಏನು ಹೇಳುತ್ತೇನೆ ಮತ್ತು ಮಾಡುತ್ತೇನೆ ಎಂಬುದನ್ನು ಪೇತ್ರನು ಕಲ್ಪಿಸಿಕೊಳ್ಳಲಾರದೆ ಹೋದನು.

ಆ ರಾತ್ರಿಯಲ್ಲಿ, ಅನಂತರದಲ್ಲಿ, ತೋಟದಲ್ಲಿ, ಪೇತ್ರನು ಯೇಸುವನ್ನು ಬಂಧಿಸಲು ಬಂದಿದ್ದ ಸಿಪಾಯಿಗಳೊಂದಿಗೆ ಹೊರಾಟ ಮಾಡಲು ಸಿದ್ಧನಾಗಿದ್ದನು (18:10). ಒಂದು ಕತ್ತಿಯನ್ನು ತೆಗೆದುಕೊಂಡು ಮಹಾಯಾಜಕನ ಒಬ್ಬ ಗುಲಾಮನಾದ ಮಲ್ಕನನ್ನು ಹೊಡೆದನು. ಪೇತ್ರನು ಆ ಗುಲಾಮನ ತಲೆಯನ್ನು ಕತ್ತರಿಸಲು ಉದ್ದೇಶಿಸಿದ್ದರೂ, ಅವನು ಆ ಮನುಷ್ಯನ ಬಲಗಿವಿಯನ್ನು ಕತ್ತರಿಸಲು ಶಕ್ತನಾದನು, ಹೋರಾಟವು ಪ್ರಾರಂಭವಾದ ಕೂಡಲೇ ನಿಲ್ಲಿಸಲ್ಪಟ್ಟಿತು; ಯೇಸುವು ಪೇತ್ರನಿಗೆ ಕತ್ತಿಯನ್ನು ಒರೆಯಲ್ಲಿ ಹಾಕಲು ಹೇಳಿದನು. ಕಥೆಯ ಈ ಭಾಗದಲ್ಲಿ, ಪೇತ್ರನು ಶಿಷ್ಯರಲ್ಲಿ ಬಹಳ ಧೈರ್ಯವುಳ್ಳವನೂ ಅತೀ ಶೂರನೂ ಆಗಿ ಕಂಡುಬಂದನು.

ಯೇಸುವು ಮಹಾಯಾಜಕನ ಮನೆಗೆ ತೆಗೆದುಕೊಂಡು ಹೋಗುವಾಗ ಪೇತ್ರನ ವೈಯಕ್ತಿಕ ನ್ಯಾಯವಿಚಾರಣೆಯು ತೀವ್ರಗೊಳ್ಳುತ್ತದೆ. ಮುಂದಿನ ಸಂಗತಿಗಳು ಸಂಭವಿಸಿದಾಗ ಪೇತ್ರನು ಆಗಲೇ ಮಹಾಯಾಜಕನ ಅಂಗಳದೊಳಗೆ ನಿಜವಾಗಿಯೂ ಇದ್ದನೆಂದು ಯೋಹಾನು ವಿವರಿಸಿದ್ದಾನೆ (18:15, 16). ಅಲ್ಲಿ ಬಾಗಿಲು ಕಾಯುತ್ತಿದ್ದ ಒಬ್ಬ ಗುಲಾಮ ಬಾಲಕಿಯು "ನೀನು

ಸಹ ಆ ಮನುಷ್ಯದಲ್ಲಿ ಒಬ್ಬನೇನು?" (18:17) ಎಂದು ಪೇತ್ರನನ್ನು ಕೇಳಿದಳು. "ಅಲ್ಲ" ಎಂದು ಅವನು ಉತ್ತರ ಕೊಟ್ಟನು. ಸ್ವಲ್ಪ ಸಮಯದ ಮೊದಲು ಯೇಸುವನ್ನು ಬಂಧಿಸಲು ಕಳುಹಿಸಲ್ಪಟ್ಟ ಸಿಪಾಯಿಗಳ ಗುಂಪಿನೊಂದಿಗೆ ಹೋರಾಡಲು ಸಿದ್ಧನಾಗಿದ್ದ ಮನುಷ್ಯನು, ಈಗ ಒಬ್ಬ ಗುಲಾಮ ಬಾಲಕಿಯಿಂದ ಭಯಪಡಿಸಲ್ಪಟ್ಟನು!

ರಾತ್ರಿಯಲ್ಲಿ ಛಳಿಯಿತ್ತು. ಆದುದರಿಂದ ಗುಲಾಮರು ಮತ್ತು ಸಿಪಾಯಿಗಳು ಬೆಂಕಿ ಹಚ್ಚಿ, ತಮ್ಮನ್ನು ಬೆಚ್ಚಗಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದರು. ಬೆಂಕಿಯ ಸುತ್ತಲೂ ಇದ್ದ ಜನರೊಂದಿಗೆ ಪೇತ್ರನು ನಿಂತುಕೊಂಡು ಬೆಂಕಿ ಕಾಯಿಸಿಕೊಳ್ಳುತ್ತಿದ್ದಾಗ, ಅವರಲ್ಲಿ ಒಬ್ಬನು, "ನೀನು ಅವನ ಶಿಷ್ಯರಲ್ಲಿ ಒಬ್ಬನೇನು?" ಎಂದು ಅವನಿಗೆ ಹೇಳಿದನು (18:25). "ನಾನು ಅಲ್ಲ" ಎಂದು ಪೇತ್ರನು ಎರಡನೆಯ ಸಾರಿ ಅಲ್ಲಗಳೆದನು. ಎರಡನೆಯ ಅಲ್ಲಗಳೆಯುವಿಕೆಯ ಕಹಿಯನ್ನು ನುಂಗಿ ಕೊಳ್ಳುತ್ತಿದ್ದಾಗ, ಇನ್ನೊಬ್ಬ ಗುಲಾಮನು, ತೋಟದಲ್ಲಿಯ ಘಟನೆಗಳಿಗೆ ಸಾಕ್ಷಿಯಾಗಿದ್ದವನು, ಪೇತ್ರನು ಕಿವಿ ಕತ್ತರಿಸಿದ ಮಲ್ಕನ ಸಂಬಂಧಿಕನು, "ನಾನು ನಿನ್ನನ್ನು ತೋಟದಲ್ಲಿ ಅವನ ಸಂಗಡ ಕಂಡೆನಲ್ಲವೇ" ಅಂದನು (18:26). "ಅದಕ್ಕೆ ಪೇತ್ರನು ತಿರಿಗಿ ಅಲ್ಲ ಅಂದನು ಕೂಡಲೇ ಕೋಳಿ ಕೂಗಿತು" (18:27) ಎಂದು ಯೋಹಾನನು ದಾಖಲೆ ಮಾಡಿದ್ದಾನೆ. ಯೇಸುವು ವಿಚಾರಿಸಲ್ಪಟ್ಟು ನಿರಪರಾಧಿ ಎಂದು ಕಂಡು ಬಂದನು, ಪೇತ್ರನು ವಿಚಾರಿಸಲ್ಪಟ್ಟು ಹೇಡಿಯೆಂದು ಕಂಡು ಕೊಳ್ಳಲ್ಪಟ್ಟನು.

ಸುವಾರ್ತೆಯು ಯಾವಾಗಲೂ ಮೂರು ಭಿನ್ನವಾದ ಮಟ್ಟಗಳಲ್ಲಿ ಯಾವಾಗಲೂ ಓದಲ್ಪಡಬೇಕು. ಮೊದಲನೆಯ ಮಟ್ಟದಲ್ಲಿ, ಯೇಸುವಿನ ಜೀವನದಲ್ಲಿ ಏನು ಸಂಭವಿಸಿತು ಎಂಬುದರ ಪ್ರಶ್ನೆ ಇರುತ್ತದೆ. ಎರಡನೆಯ ಮಟ್ಟದಲ್ಲಿ ವಿಷಯವು ಕಥೆಯನ್ನು ತಾನು ಪುನಃ ಹೇಳು ವದರಿಂದ ಪುರಾತನ ಸಭೆಗೆ ಕಲಿಯುವದಕ್ಕಾಗಿ ಸುವಾರ್ತೆಯ ಬರಹಗಾರನ ಉದ್ದೇಶವೇನಿತ್ತು ಎಂಬುದಾಗಿದೆ. ಮೂರನೆಯ ಮಟ್ಟದಲ್ಲಿ ಇಂದು ನಮ್ಮ ಜೀವನಗಳಿಗಾಗಿ ಈ ಸುವಾರ್ತೆಯ ಅರ್ಥವೇನಾಗಿರುವದು ಎಂಬುದನ್ನು ನಾವು ಕೇಳತಕ್ಕದ್ದು.

ಒಂದು "ಮೊದಲನೆ ಮಟ್ಟದ" ಪೇತ್ರನ ವಿಚಾರಣೆಯ ಓದುವಿಕೆಯು ಪೇತ್ರನು ಯೇಸುವನ್ನು ಮೂರು ಸಲ ಅಲ್ಲಗಳೆದನು ಎಂದು ಹೇಳುತ್ತದೆ. ಒಂದು "ಎರಡನೆ ಮಟ್ಟದ" ಓದುವಿಕೆಯು ಈಗಾಗಲೇ ಅನೇಕ ಸಲ, ಈ ಸುವಾರ್ತೆಯಲ್ಲಿ ಹೇಳಲ್ಪಟ್ಟ ಸಂದೇಶವನ್ನು ನನಗೆ ತರುತ್ತದೆ.[7] ಅಂದರೆ ಕ್ರೈಸ್ತರು ತಮ್ಮ ವಿಶ್ವಾಸವನ್ನು ಬಹಿರಂಗ ವಾಗಿ, ಹಾಗೆ ಮಾಡುವುದು ಕಠಿಣವಾದ ಹಿಂಸೆಯನ್ನು ತಂದರೂ, ಪ್ರದರ್ಶಿಸಲು ಸಿದ್ಧರಾಗಿರತಕ್ಕದ್ದು ನಮ್ಮ "ಮೂರನೆಯ ಮಟ್ಟದ" ಓದುವಿಕೆಯು ನಮ್ಮ ನಂಬಿಕೆಯಲ್ಲಿ ಧೈರ್ಯವುಳ್ಳವರಾಗಿದ್ದು, ಜಗತ್ತು ನಮ್ಮನ್ನು ಅಪಹಾಸ್ಯ ಮಾಡಿದರೂ ಇಲ್ಲವೇ ತೊಂದರೆ ಕೊಟ್ಟರೂ ಯೇಸುವಿಗೆ ನಮ್ಮ ಸಮರ್ಪಣೆಯನ್ನು ಅರಿಕೆ ಮಾಡುವವರೂ ಆಗಿರಬೇಕೆಂದು ನಮ್ಮನ್ನು ಕರೆಯುತ್ತದೆ.

1995ರಲ್ಲಿ ನನ್ನ ಒಬ್ಬ ಒಳ್ಳೆ ಸ್ನೇಹಿತನು ಆಫ್ರಿಕಾಕ್ಕೆ ಮಿಶನರಿಯಾಗಿ ಹೋದನು. ಅವನು ಕರ್ತನನ್ನು ಪ್ರೀತಿಸುತ್ತಾನೆ ಮತ್ತು ಇತರರೊಂದಗೆ ಸುವಾರ್ತೆಯನ್ನು ಸಾರಲು ಹಂಚಿಕೊಳ್ಳಲು ಅವನಿಗೆ ಅತ್ಯಾಸಕ್ತಿಯಿರುತ್ತದೆ. ವಿದೇಶದ ಒಬ್ಬ ಮಿಶನರಿಯಾಗಿ ಅವನು ಒಬ್ಬ ಆಸಕ್ತಿಯುಳ್ಳ ಕ್ರೈಸ್ತನಾಗಿ ನಿಂತುಕೊಳ್ಳುತ್ತಾನೆ. ಅವನು ತನ್ನ ಮೊದಲಿನ ವರದಿಗಳಲ್ಲಿ ಒಂದರಲ್ಲಿ ಅವನು ಆಫ್ರಿಕಾಕ್ಕೆ ವಿಮಾನದಲ್ಲಿ ಹೋದದ್ದರ ಬಗ್ಗೆ ಬರೆದಿದ್ದಾನೆ:

> ... ಹಿಂದಿನ ಬೇಸಿಗೆ ಕಾಲದಲ್ಲಿ ಉಗಾಂಡಾಕ್ಕೆ ಹೋಗುತ್ತಿದ್ದ ಏರೋಪ್ಲೇನಿನಲ್ಲಿ ನನ್ನ ಪಕ್ಕದಲ್ಲಿ ಒಬ್ಬ ಮನುಷ್ಯನು ಕುಳಿತು ಕೊಂಡಿದ್ದನು. ಅವನು ಹೇಳಿದ್ದು ನೆರಳಿನಂತೆ ನನ್ನಲ್ಲಿ ನಾಟಿತು. ಯೇಸು ಕ್ರಿಸ್ತನ ಬಗ್ಗೆ ಪ್ರಸಂಗಿಸಲು ನಾವು ಉಗಾಂಡಾಕ್ಕೆ ಬರುತ್ತಿದ್ದೇ ವೆಂದು ಹೇಳಿದಾಗ, ಯುರೋಪಿಯನ್ ಮನುಷ್ಯನು ನನಗೆ, "ಕ್ಷಮಿಸಿರಿ, ಆದರೆ ಅವರಿಗೆ ಈಗಾಗಲೇ ಆಫ್ರಿಕಾದಲ್ಲಿ ದೇವರುಗಳು ಇಲ್ಲವೋ?" ಎಂದು ಕೇಳಿದನು.

ಹೇಗೆ ಉತ್ತರ ಕೊಡಬೇಕೆಂದು ನನಗೆ ತಿಳಿಯಲಿಲ್ಲ. ಆದುದರಿಂದ ನಾನು ಏನನ್ನೂ ಹೇಳಲಿಲ್ಲ.

ಆ ಅನುಭವದ ಬಗ್ಗೆ ನನ್ನ ಸ್ನೇಹಿತನು ಪೇಚಿಗೆ ಸಿಲುಕಿಕೊಳ್ಳುವಂತೆ ಮಾಡಿದ್ದು, ಯೇಸುವಿನ ಬಂಧನದ ರಾತ್ರಿಯಲ್ಲಿ ಪೇತ್ರನಂತೆ ಅವನು ಭಾವಿಸಿದ್ದಾಗಿದೆಯೆಂದು ನಾನು ಯೋಚಿಸುತ್ತೇನೆ. ಮೌನವಾಗಿರುವಂತೆ ಒತ್ತಾಯಿಸಲ್ಪಡುವುದು ಹೇಗಿರುತ್ತದೆಂಬುದನ್ನು ನಾನು ತಿಳಿದವನಾಗಿದ್ದೇನೆ. ಯೋಹಾನನ ಸುವಾರ್ತೆಯು ಪೇತ್ರನ ನ್ಯಾಯವಿಚಾರಣೆಯ ಕಥೆಯನ್ನು ಯೋಚಿಸಲಿಕ್ಕಾಗದಂಥದ್ದನ್ನು ನಾವು ಮಾಡಲಿಕ್ಕೆ ಅಂದರೆ ನಮ್ಮ ಕರ್ತನ ಅಲ್ಲಗಳೆಯುವದಕ್ಕೆ ನಮಗೆ ಕಾರಣವಾಗುವ ಒತ್ತಡಗಳ ಬಗ್ಗೆ ಹೇಳುತ್ತದೆ!

## ಪಿಲಾತನ ನ್ಯಾಯ ವಿಚಾರಣೆ

ಸಾಮನ್ಯವಾಗಿ ಗಮನಿಸುವವನಿಗೆ ಆ ರಾತ್ರಿಯಲ್ಲಿ, ಯೇಸುವು ಒಬ್ಬನೇ ನ್ಯಾಯವಿಚಾರಣೆಯಲ್ಲಿ ಇರುವಾತನಾಗಿರುತ್ತಾನೆ. ಹೀಗಿದ್ದರೂ, ಯೋಹಾನ ಸುವಾರ್ತೆಯು ತಮ್ಮ ಸ್ವಂತ ಮಾರ್ಗಗಳಲ್ಲಿ ಪೇತ್ರನು ಪಿಲಾತನೂ ನ್ಯಾಯವಿಚಾರಣೆಗೆ ಗುರಿಯಾದರೆಂದು ತೋರಿಸುತ್ತದೆ. ಪೇತ್ರನೂ ಸಮರ್ಪಣೆಯು ಪರೀಕ್ಷಿಸಲ್ಪಟ್ಟಿತು. "ಯೇಸುವಿನೊಂದಿಗೆ ನೀನು ಏನು ಮಾಡುತ್ತೀ?" ಎಂಬ ಎಲ್ಲಾ ಸಮಯಗಳ ಅತೀ ದೊಡ್ಡ ಪ್ರಶ್ನೆಯನ್ನು ಪಿಲಾತನು ಎದುರಿಸಿದನು. ಕೆಲವೇ ತಾಸುಗಳೊಂದಿಗೆ, ಪಿಲಾತನು ಯೇಸುವಿನ ಶಿಷ್ಯರು ಆತನೊಂದಿಗೆ ಮೂರು ವರ್ಷಗಳ ಅವಧಿಯಲ್ಲಿ ವ್ಯವಹರಿಸಿದ ಎಲ್ಲಾ ಪ್ರಶ್ನೆಗಳನ್ನು ಎದುರಿಸಬೇಕಾಗಿತ್ತು.

ಯೇಸುವು ಪಿಲಾತನ ಮುಂದೆ ತರಲ್ಪಟ್ಟಾಗ, ರಾಜ್ಯಪಾಲನ ಮೊದಲನೆಯ ಸೂಚನೆಯು, "ನೀವೇ ಅವನನ್ನು ತಕ್ಕೊಂಡು ಹೋಗಿ ನಿಮ್ಮ ಧರ್ಮಶಾಸ್ತ್ರದ ಪ್ರಕಾರ ಅವನಿಗೆ ತೀರ್ಪುಮಾಡಿರಿ" ಎಂಬುದಾಗಿತ್ತು (18:31). ಪಿಲಾತನು ಯೆಹೂದ್ಯರಿಗಾಗಲೀ ಇಲ್ಲವೇ ಅವರ ಸತತವಾದ ವಾದವಿವಾದಗಳಿಗೂ ಗಮನ ಕೊಡಲಿಲ್ಲ. ಹೀಗಿದ್ದರೂ, ಯೇಸುವನ್ನೊಳಗೊಂಡ ಸಮಸ್ಯೆಯು ಹೊರತು ಹೋಗುವದಿಲ್ಲ. ಹೀಗೆ ಪಿಲಾತನು ಈ "ಯೆಹೂದಿ ವಾದವಿವಾದಕ್ಕೆ" ಸಾಧಾನದ ನಿರ್ಣಯವನ್ನು ಕಂಡುಕೊಳ್ಳಲಿಕ್ಕೆ ಮುಂದಿನ ಹಲವಾರು ತಾಸುಗಳನ್ನು ಕಳೆದನು. ಹೀಗೆ ಮಾಡುವಲ್ಲಿ, ಯೇಸುವಿನೊಂದಿಗೆ ಏನು ಮಾಡಬೇಕು ಎಂಬ ಪ್ರಶ್ನೆಯೊಂದಿಗೆ ಹೋರಾಡ ಬೇಕಾಯಿತು!

ನಾವು ಈಗಲೇ ನೋಡಿದಂತೆ ಪಿಲಾತನ ಮೊದಲನೆಯ ಪ್ರತಿಕ್ರಿಯೆಯು ಉದಾಸೀನತೆ (18:31). ಒಂದಿಲ್ಲಾ ಒಂದು ರೀತಿಯಲ್ಲಿ ಅವನು ಯೇಸುವಿನ ಬಗ್ಗೆ ಗಮನಿಸಲಿಲ್ಲ. ಯೇಸುವು ಕಾಣೆಯಾಗುವುದನ್ನು ಅವನು ಹೆಚ್ಚಾಗಿ ಅಪೇಕ್ಷಿಸಿದನು. ಉದಾಸೀನತೆಯು ಯೇಸುವನ್ನು ಕುರಿತು ಇಂದು ನಾವು ಎದುರಿಸುವುದು ಹೆಚ್ಚು ಸಾಮನ್ಯವಾದ ಮನೋಭಾವನೆಯಾಗಿದೆ. ಹೆಚ್ಚಾದ ಜನರು ಆತನ ಬಗ್ಗೆ ಯೋಚಿಸುವುದೇ ಇಲ್ಲ, ಹೀಗಿದ್ದರೂ, ಯೇಸವಿನ ಬಗ್ಗೆ ತೀರ್ಪು ಮಾಡುವದನ್ನು ತಪ್ಪಿಸಿಕೊಳ್ಳಲಾರನು ಮತ್ತು ಇಂದು ನಾವೂ ತಪ್ಪಿಸಿಕೊಳ್ಳಲಾರೆವು!

ಯೇಸುವಿಗೆ ಪಿಲಾತನ ಎರಡನೆಯ ಪ್ರತಿಕ್ರಿಯೆಯು ತಿರಸ್ಕಾರವಾಗಿತ್ತು. ಯೇಸುವಿನ ಬಗ್ಗೆ ರಾಜಪಾಲನ ಮೊದಲಿನ ಪ್ರಶ್ನಿಸುವಿಕೆಯ ಸಮಯದಲ್ಲಿ ಅವನು, "ನಾನೇನು ಯೆಹೂದ್ಯನೇ? ನಿನ್ನ ಸ್ವಂತ ಜನವೂ ಮಹಾಯಾಜಕರೂ ನಿನ್ನನ್ನು ನನಗೆ ಒಪ್ಪಿಸಿದ್ದಾರೆ. ನೀನು ಏನು ಮಾಡಿದ್ದೀ?" (18:35) ಎಂದು ಹೇಳಿದನು. ಪಿಲಾತನಿಗೆ ಯೇಸುವು ಕೇವಲ ಇನ್ನೊಬ್ಬ ಯೆಹೂದಿ ತೊಂದರೆದಾಯಕನಾಗಿದ್ದನು. ಇಂದೂ ಸಹ ಅನೇಕರು ಯೇಸುವನ್ನು ಅದೇ ರೀತಿಯಲ್ಲಿ ತಿಳಿದುಕೊಳ್ಳುತ್ತಾರೆ. ಯೇಸುವಿಗಾಗಿ ಮತ್ತು ಆತನ ಬೋಧನೆಗಳಿಗಾಗಿ ಅವರಿಗೆ ತಿರಸ್ಕಾರ ಮಾತ್ರವೇ ಇತ್ತು.

ಯೇಸುವಿಗೆ ಪಿಲಾತನ ಮುಂದಿನ ಪ್ರತಿಕ್ರಿಯೆಯು ತಪ್ಪಿಸಿಕೊಳ್ಳುವದಾಗಿತ್ತು. ಮೊದಲನೆಯ

ಸಲ ಅವನು ಆತನನ್ನು ಪ್ರಶ್ನಿಸಿದ ನಂತರ, ನಜರೇತಿನವನ ಬಗ್ಗೆ ಒಂದು ತೀರ್ಮಾನವನ್ನು ಮಾಡಲು ಪ್ರಯತ್ನಿಸಿದನು. ಪಸ್ಕ ಹಬ್ಬದ ನಿಮಿತ್ತವಾಗಿ ಯೇಸುವನ್ನು ಬಿಡುಗಡೆ ಮಾಡುವ ಪರಿಹಾರವನ್ನು ಸೂಚಿಸಿದಾಗ (18:38, 39), ಪಿಲಾತನು ಆತನ ಬಗ್ಗೆ ದೃಢವಾದ ತೀರ್ಪನ್ನು ಮಾಡುವದನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಇದೇ ರೀತಿಯ ಪ್ರತಿಕ್ರಿಯೆಯನ್ನು ಯೇಸುವಿನ ಬಗ್ಗೆ ನೋಡಿರುವಿರೋ? ಜನರು ತಮ್ಮನ್ನು ತಮ್ಮ ಸಂಗೀತದಲ್ಲಿ ಇಲ್ಲವೇ ತಮ್ಮ ಪಾರ್ಟಿಗಳಲ್ಲಿ ಯೇಸುವಿನ ಬಗ್ಗೆ ಏನಾದರನ್ನು ಮಾಡುವದನ್ನು ತಪ್ಪಿಸಿಕೊಳ್ಳುವರು!

ಭಯವು ಯೇಸುವಿಗೆ ಪಿಲಾತನ ನಾಲ್ಕನೆಯ ಪ್ರತಿಕ್ರಿಯೆಯಾಗಿತ್ತು. ಯೇಸುವು ತನ್ನನ್ನು ದೇವರ ಕುಮಾರನು ಎಂದು ಹೇಳಿಕೊಂಡಿದ್ದಾನೆಂಬುದನ್ನು ಕೇಳಿದಾಗ, ಪಿಲಾತನು ಭಯಪಟ್ಟನು (19:8). ಎಲ್ಲಾ ಯೆಹೂದ್ಯರ ಮೇಲೆ ಪಿಲಾತನಿಗೆ ಜೀವ ಮತ್ತು ಮರಣದ ಅಧಿಕಾರವಿದ್ದರೂ, ತನ್ನ ಮುಂದೆ ಬಂಧಿತನಾಗಿ ನಿಂತಿರುವ ಗಲಿಲಾಯದವನಿಗೆ ಅವನು ಭಯಪಟ್ಟನು. ದಾಟಿಹೋಗುವ ಗಡಿಗಳಲ್ಲಿ "ಎಚ್ಚರಿಕೆ! ಗನ್ನುಗಳಾಗಲೀ ಬೈಬಲುಗಳಾಗಲಿ ಇಲ್ಲ!" ಎಂಬ ಸಂಕೇತಗಳನ್ನು ಹಾಕಿರುವ ದೇಶಗಳಲ್ಲಿ ಪ್ರವೇಶಿಸಿದ ಹಲವಾರು ಮಿಶನರಿಗಳನ್ನು ನಾನು ಬಲ್ಲವನಾಗಿದ್ದೇನೆ. ಇಂದು ಬಲಶಾಲಿ ಸರಕಾರಗಳು ಯೇಸು ಕ್ರಿಸ್ತನ ಸುವಾರ್ತೆಯ ಬಲದ ಮುಂದೆ ನಡುಗುತ್ತವೆ, ಯುದ್ಧದ ಆಯುಧಗಳಿಗೆ ಭಯಪಡುವದಕ್ಕಿಂತ ಹೆಚ್ಚಾಗಿ ಆತನಿಗೆ ಭಯಪಡುತ್ತವೆ.

ಅಂತಿಮವಾಗಿ, ಪಿಲಾತನು ಯೆಹೂದಿನಾಯಕರ ಒತ್ತಡಕ್ಕೆ ಮಣಿದು ಪ್ರತಿಕ್ರಿಯೆ ತೋರಿಸಿದನು. ಯೇಸುವು ನಿರ್ದೋಷಿಯೆಂದು ಪಿಲಾತನು ತಿಳಿದಿದ್ದನು ಆದರೆ ಅವನಿಗೆ ಎದ್ದು ನಿಂತುಕೊಂಡು ಯಾವುದು ಸರಿಯಾಗಿದೆ ಎಂಬುದನ್ನು ಮಾಡಲಿಕ್ಕೆ ಧೈರ್ಯವಿಲ್ಲದವನಾಗಿದ್ದನು. ಅದರ ಬದಲು ಅವನು ಸುಲಭವಾದ ಮಾರ್ಗವನ್ನು ಆಯ್ದುಕೊಂಡು, ಯೇಸುವನ್ನು ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿಕೊಟ್ಟನು, ಈ ರೀತಿಯಲ್ಲಿ ಪೇತ್ರನ ಮತ್ತು ಪಿಲಾತನ ಕಥೆಗಳು ಒಂದೇ ರೀತಿಯಲ್ಲಿ ಇರುತ್ತವೆ.

ಪಿಲಾತನು ಕಥೆಯು ಯೇಸುವಿನ ಬಗ್ಗೆ ತೀರ್ಮಾನಿಸುವದನ್ನು ಯಾರೂ ತಪ್ಪಿಸಿಕೊಳ್ಳಲಾರರು ಎಂಬುದನ್ನು ಉದಾಹರಿಸುತ್ತದೆ. ಆತನನ್ನು ಕಡೆಗಣಿಸಲು ನಾವು ಪ್ರಯತ್ನಿಸಬಹುದು ಆದರೆ ಆತನು ಕಡೆಗಣಿಸಲ್ಪಡಲಾರನು ಒಂದು ಹಂತದಲ್ಲಿ ನಾವು ಆತನಿಗೆ "ಆಗಲಿ" ಇಲ್ಲವೇ "ಇಲ್ಲ" ಎಂದು ಹೇಳಲು ಒತ್ತಾಯಿಸಲ್ಪಡುತ್ತೇವೆ. ಆತನಿಗೆ ವಿರುದ್ಧವಾಗಿ ತಿರುಗಲು ಇಲ್ಲವೇ ಆತನಿಂದ ನಮ್ಮನ್ನು ದೂರವಿಟ್ಟು ಕೊಳ್ಳಲು ಒತ್ತಡಗಳನ್ನು ನಾವು ಎದುರಿಸುತ್ತೇವೆ ಮತ್ತು ಯೇಸುವಿನ ಬಗ್ಗೆ ಏನು ಮಾಡಬೇಕೆಂದು ನಾವು ಇನ್ನೂ ತೀರ್ಮಾನಿಸಬೇಕಾಗುತ್ತದೆ.

## ಮುಕ್ತಾಯ

ನಾವು ವಿಚಾರಿಸಿದ ಮೂರು ನ್ಯಾಯವಿಚಾರಣೆಗಳು ಸುವಾರ್ತೆಯನ್ನೂ ಅದಕ್ಕೆ ನಮ್ಮ ಉತ್ತರವನ್ನೂ ವಿವರಿಸುತ್ತವೆ. ಯೇಸುವು ವಿಚಾರಣೆಗೆ ಒಳಗಾಗಿ, ನಿರ್ದೋಷಿ ಎಂದು ಕಂಡುಬಂದನು. ನೀನು ಮತ್ತು ನಾನು, ಪೇತ್ರ ಹಾಗೂ ಪಿಲಾತನಂತೆ ಈಗ ನಾವೇ ನ್ಯಾಯ ವಿಚಾರಣೆಯಲ್ಲಿದ್ದೇವೆ ನಮಗಿರುವ ಪ್ರಶ್ನೆಯು, "ನಮಗಾಗಿ ಮರಣ ಹೊಂದಿದಾತನಿಗಾಗಿ ನಾವು, ನಿಂತು ಕೊಳ್ಳುತ್ತೇವೆಯೋ?" ಎಂಬುದು ಒತ್ತಡವಿರುವಾಗ, ನಾವು, "ನಜರೇತಿನ ಯೇಸುವಿನ ಶಿಷ್ಯನು ನನಾಗಿರುವೆನು" ಎಂದು, ಹೇಳಲು ಬಲವುಳ್ಳವರಾಗಿರುವೆವೋ? ಆತನ ಬಗ್ಗೆ ತೀರ್ಮಾನ ಮಾಡುವದನ್ನು ನಾವು ತಪ್ಪಿಸಿಕೊಳ್ಳಲಾರೆವು ಯೇಸುವಿನೊಂದಿಗೆ ನೀನು ಏನನ್ನು ಮಾಡುವಿ?

ಟಿಪ್ಪಣಿಗಳು

[1]ಬಹಳ ಮಳೆ ಬೀಳುವ ಸಮಯದಲ್ಲಿ, ಕಿದ್ರೋನ್ ಹಳ್ಳವು ಯೆರೂಸಲೇಮಿನ ಪೂರ್ವದಿಕ್ಕಿನಲ್ಲಿ ಕೊಳ್ಳದ ಮುಖಾಂತರ ಹರಿಯುತಿತ್ತು. ಪಟ್ಟಣದ ಗೋಡೆಗಳನ್ನು ಎಣ್ಣೆ ಮರಗಳನ್ನು ಬೆಟ್ಟದಿಂದ ಬೇರೆ ಮಾಡುತಿತ್ತು. ಎಣ್ಣೆ ಮರಗಳ ಬೆಟ್ಟದ ಮೇಲೆ ಗೆತ್ಸೇಮನೆ ತೋಟ ವಿತ್ತು (ಮತ್ತಾಯ 26:36). ಅದು ಈ ವಚನದಲ್ಲಿ ನಮೂದಿಸಲ್ಪಟ್ಟಿದೆ. [2]ರೋಮನ್ ದೇಶಾಧಿಪತಿಯು ಸಾಮಾನ್ಯವಾಗಿ ಸಮುದ್ರ ಬಂದರಿನ ಪಟ್ಟಣ ಕೈಸರಯದಲ್ಲಿ ವಾಸಿಸುತ್ತಿದ್ದನು. ಅದು ಹೆಚ್ಚಾಗಿ ರೋಮನ್ ಸಂಸ್ಕೃತಿಯುಳ್ಳದ್ದಾಗಿತ್ತು. ಹಾಗಿದ್ದರೂ ದೇಶಾಧಿಪತಿಯು ತನ್ನ ರಾಜಕೀಯ ಹಾಗೂ ಮಿಲಿಟರಿ ಇರುವಿಕೆಯನ್ನು ಪಸ್ಕ ಹಬ್ಬದ ಸಮಯದಲ್ಲಿ ಯೆರೂಸಲೇಮಿನಲ್ಲಿ ಹೆಚ್ಚಾಗಿ ತಿಳಿಯುವಂತೆ ಮಾಡುತ್ತಿದ್ದನು. ಪಸ್ಕ ಹಬ್ಬಕ್ಕೆ ವಿಶೇಷವಾದ ಮಹತ್ವವಿತ್ತು ಮತ್ತು ಅಂಥ ಸಂದರ್ಭಗಳಲ್ಲಿ ಯೆಹೂದ್ಯರು ರೋಮಿಗೆ ವಿರುದ್ಧವಾಗಿ ದಂಗೆಯೇಳಲು ಗಂಡಾಂತರವಿತ್ತು (ಪಸ್ಕವು ಇನ್ನೊಂದು ದಬ್ಬಾಳಿಕೆಯಿಂದ ಐಗುಪ್ತದಿಂದ ಯೆಹೂದ್ಯರು ತಪ್ಪಿಸಿಕೊಂಡು ಬಂದ ಸಮಯಕ್ಕೆ ಸ್ಮಾರಕವಾಗಿ ಪ್ರಾರಂಭವಾಯಿತು!) [3]ನೋಡಿರಿ. ಅಪೊಸ್ತಲರ ಕೃತ್ಯಗಳು 10:28; 11:3, 12. [4]ಪರಿಶುದ್ಧ ಬರಹಗಳು ಪಿಲಾತನನ್ನು ಅತೀ ಪುರಾತನ ಹೆಚ್ಚಾದ ಚರಿತ್ರೆಗಾರರಕ್ಕಿಂತ ಹೆಚ್ಚು ಉದಾರವಾಗಿ ನಡಿಸಿಕೊಳ್ಳುತ್ತದೆ. ಪಿಲಾತನು ಒಬ್ಬ ಕ್ರೂರ ರೋಮನ್ ರಾಜ್ಯಪಾಲನಂತೆ ನೋಡಲ್ಪಟ್ಟನು. ಅವನು ಯೆಹೂದ್ಯರನ್ನು ದ್ವೇಷಿಸಿದನು ಪ್ರತಿಯೊಂದು ಸಲ ಅವಕಾಶ ಸಿಕ್ಕಾಗ ಅವರು ನೊಂದು ಕೊಳ್ಳುವಂತೆ ಮಾಡುತ್ತಿದ್ದನು. ಇಸ್ರಾಯೇಲಿನಲ್ಲಿ ಅವನ ಹತ್ತು ವರ್ಷಗಳ ಅವಧಿಯಲ್ಲಿ, ಪಿಲಾತನು ದೇವಾಲಯದ ನಿಧಿಯಿಂದ ಕದ್ದುಕೊಂಡನು, ಪಟ್ಟಣದೊಳಗೆ ಅಸಹ್ಯವಾದ ರೋಮನ್ "ವಿಗ್ರಹಗಳನ್ನು" ತರುವದರಿಂದ ದಂಗೆ ಪ್ರಾರಂಭಿಸಿದನು. ಗಲಿಲಾಯದ ಆರಾಧಕರ ಒಂದು ಗುಂಪನ್ನು ಕೊಲೆಮಾಡಿದನು (ಲೂಕ 13:1). ಮತ್ತು ಗೆರಿಜಿಮ್ ಬೆಟ್ಟದ ಮೇಲೆ ಸಮಾರ್ಯದ ದೊಡ್ಡ ಗುಂಪನ್ನು ಸಂಹರಿಸಿದನು. ಪಿಲಾತನು ಯೇಸುವಿಗೆ, "ನಾನೇನು ಯೆಹೂದ್ಯರ ಬಗ್ಗೆ ತನ್ನ ದ್ವೇಷವನ್ನು ಮುಚ್ಚಿಟ್ಟು ಕೊಳ್ಳಲಿಕ್ಕೆ ಪ್ರಯತ್ನಿಸಲಿಲ್ಲ?" [5]ಬರಬ್ಬನು ಇತ್ತೀಚೆಗಿನ, ರಾಜಕೀಯ ದಂಗೆಯಲ್ಲಿ ಕೊಲೆ ಮಾಡಿದ್ದನು (ಲೂಕ 23:19; ಅಪೊಸ್ತಲರ ಕೃತ್ಯಗಳು 3:14). [6]ತನ್ನಷ್ಟಕ್ಕೆ ತಾನೇ ತನ್ನ ಪ್ರಾಣವನ್ನು ಯೇಸುವು ಕೊಡುವ ಪ್ರಸ್ತಾಪವು ಒಳ್ಳೆಯ ಕುರುಬನಂತೆ ಯೇಸುವಿಗೆ ಸಂಬಂಧದಲ್ಲಿ ಈ ಮೊದಲು ಪರಿಚಯಿಸಲ್ಪಟ್ಟಿದೆ (10:17, 18). [7]ನಿಕೊದೇಮನ (ಯೋಹಾನ 3) ಮತ್ತು ಹುಟ್ಟು ಕುರುಡನ (ಯೋಹಾನ 9) ಕಥೆಗಳು ಈ ಮುಖ್ಯಪ್ರಸ್ತಾಪದ ಮೊದಲಿನ ಎರಡು ಉದಹರಣೆಗಳಾಗಿವೆ.